ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ:ಎಸಿಎ–3/ಎ.3/ಎಂ.ಬಿ.ಎ/ಎಂ.ಸಿ.ಎ/ಸಂ.ನ/2019–2020

ಜ್ಞಾನಭಾರತಿ
ಬೆಂಗಳೂರು–56

ದಿನಾಂಕ:03–09–2019

ಅಧಿಸೂಚನೆ

ವಿಷಯ: 2019–20ನೇ ಶೈಕ್ಷಣಿಕ ಸಾಲಿಗೆ ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸುಗಳಿಗೆ ಸಂಯೋಜನೆ ನವೀಕರಿಸುವ ಬಗೆಗೆ.

ಉಲ್ಲೇಖ: 1. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಸೀಟ್ ಮ್ಯಾಟ್ರಿಕ್ಸ್.
2. ಕುಲಪತಿಯವರ ಅನುಮೋದನೆ ದಿನಾಂಕ: 31–08–2019.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 59ನೇ ಪ್ರಕರಣದ 17 ಮತ್ತು 18ನೇ ಉಪಬಂಧದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಬೆಂಗಳೂರು ವಿಶ್ವವಿದ್ಯಾಲಯವು ಈ ಕೆಳಗೆ ನಮೂದಿಸಿರುವ ಕಾಲೇಜುಗಳಿಗೆ ಅವುಗಳಲ್ಲಿ ಅಸ್ತಿತ್ವದಲ್ಲಿರುವ ಎಂ.ಬಿ.ಎ ಮತ್ತು ಎಂ.ಸಿ.ಎ ಕೋರ್ಸುಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು 2019–20ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆಯನ್ನು ನವೀಕರಿಸಿ ಮುಂದುವರಿಸಿದೆ.

ಕ್ರ.ಸಂ.	ಕಾಲೇಜಿನ ಹೆಸರು ಮತ್ತು ವಿಳಾಸ	ಕೋರ್ಸು	ವಿದ್ಯಾರ್ಥಿ ಪ್ರಮಾಣ
1.	ಎ.ಎಂ.ಸಿ ಕಾಲೇಜು, 18ನೇ ಕಿ.ಮೀ. ಬನ್ನೇರುಘಟ್ಟ ರಸ್ತೆ, ಬೆಂಗಳೂರು–83	ಎಂ.ಬಿ.ಎ. ಎಂ.ಸಿ.ಎ.	*196 (ನೂರ ತೊಂಬತ್ತಾರು)* 60 (ಅರವತ್ತು)
2.	ಆಚಾರ್ಯಾಸ್ ಬೆಂಗಳೂರು ಬಿ ಸ್ಕೂಲ್, ಲಿಂಗದೀರನಹಳ್ಳಿ, ಮಾಗಡಿ ಮುಖ್ಯರಸ್ತೆ, ಬೆಂಗಳೂರು–091	ಎಂ.ಬಿ.ಎ.	240(ಇನ್ನೂರ ನಲವತ್ತು)
3.	ಎ.ಐ.ಎಂ.ಎಸ್. ಇನ್ಸಿಟಿಟ್ಯೂಟ್ ಆಫ್ ಹೈಯರ್ ಎಜುಕೇಷನ್ (ಹಿಂದಿನ ಹೆಸರು ಆಚಾರ್ಯ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸ್), 1ನೆ ಅಡ್ಡರಸ್ತೆ, 1ನೇ ಹಂತ, ಪೀಣ್ಯ, ಕೈಗಾರಿಕಾ ನಗರ, ಬೆಂಗಳೂರು –58	ಎಂ.ಬಿ.ಎ ಎಂ.ಸಿ.ಎ	240(ಇನ್ನೂರ ನಲವತ್ತು) 60 (ಅರವತ್ತು)
4.	ಅತ್ಮ ಕಾಲೇಜು, ನಂ.235–ಇ1, ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾ, 3ನೇ ಫೇಸ್, ಹೊಸೂರು ರಸ್ತೆ, ಬೆಂಗಳೂರು–099	ಎಂ.ಬಿ.ಎ.	60 (ಅರವತ್ತು)
5.	ಬೆಂಗಳೂರು ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ನಂ.8/35, ಆರ್.ವಿ. ಇಂಜಿನಿಯರಿಂಗ್ ಕಾಲೇಜು ಎದುರು, ಮೈಸೂರು ರಸ್ತೆ, ಬೆಂಗಳೂರು–65.	ಎಂ.ಬಿ.ಎ.	180(ನೂರ ಎಂಭತ್ತು)
6.	ಸಿಟಿ ಕಾಲೇಜು, 27/2, 33ನೇ ಕ್ರಾಸ್, 2ನೇ ಮೈನ್, 7ನೇ ಬ್ಲಾಕ್, ಜಯನಗರ, ಬೆಂಗಳೂರು–82	ಎಂ.ಬಿ.ಎ.	*216 (ಇನ್ನೂರ ಹದಿನಾರು)*
7.	ದಯಾನಂದ ಸಾಗರ್ ಕಲೆ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಶ್ಯಾವಿಗೆ ಮಲ್ಲೇಶ್ವರ ಹಿಲ್ಸ್, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು–78.	ಎಂ.ಬಿ.ಎ. ಎಂ.ಸಿ.ಎ.	180(ನೂರ ಎಂಭತ್ತು) 60 (ಅರವತ್ತು)

ಕ್ರ.ಸಂ.	ಕಾಲೇಜಿನ ಹೆಸರು ಮತ್ತು ವಿಳಾಸ	ಕೋರ್ಸ್	ವಿದ್ಯಾರ್ಥಿ ಪ್ರಮಾಣ
8.	ಡಾನ್ ಬಾಸ್ಕೊ ಇನ್ಸ್ಟಿಟ್ಯೂಟ್ ಆಫ್ ಬಯೋಸೈನ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ಕುಂಬಳಗೂಡು, ಮೈಸೂರು ರಸ್ತೆ, ಬೆಂಗಳೂರು –560 074.	ಎಂ.ಬಿ.ಎ.	120 (ನೂರ ಇಪ್ಪತ್ತು)
9.	ಈಸ್ಟ್ ವೆಸ್ಟ್ ಕಾಲೇಜ್ ಆಫ್ ಮ್ಯಾನೇಜ್ಮೆಂಟ್, ನಂ.63, ವಿಶ್ವನೀಡಂ ಅಂಚೆ, ಮಾಗಡಿ ರಸ್ತೆ, ಬೆಂಗಳೂರು–91.	ಎಂ.ಬಿ.ಎ. ಎಂ.ಸಿ.ಎ.	180(ನೂರ ಎಂಭತ್ತು) 90(ತೊಂಭತ್ತು)
10.	ಜಿ.ಟಿ. ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಅಂಡ್ ರಿಸರ್ಚ್, ನಂ.10/15, ಮಾಗಡಿ ರಸ್ತೆ, ಸುಂಕದಕಟ್ಟೆ, ವಿಶ್ವನೀಡಂ ಅಂಚೆ, ಬೆಂಗಳೂರು–091	ಎಂ.ಬಿ.ಎ.	120 (ನೂರ ಇಪ್ಪತ್ತು)
11.	ಗ್ಲೋಬಲ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್, ನಂ.6 ದೇವಾಡಿಗ ಸೌಧ, 3ನೇ ಕ್ರಾಸ್, ಡಿ ರಸ್ತೆ, ಐಡಿಯಲ್ ಹೋಮ್ ಟೌನ್‌ಶಿಪ್, ರಾಜರಾಜೇಶ್ವರಿನಗರ, ಬೆಂಗಳೂರು –560 098	ಎಂ.ಬಿ.ಎ. ಎಂ.ಸಿ.ಎ.	60 (ಅರವತ್ತು) *30 (ಮೂವತ್ತು)*
12.	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನಂ.5, 3ನೇ ಮುಖ್ಯರಸ್ತೆ, 7ನೇ ಕ್ರಾಸ್, ಆರ್.ಪಿ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು–560040	ಎಂ.ಬಿ.ಎ.	60 (ಅರವತ್ತು)
13.	ಹಿಲ್ ಸೈಡ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ನಂ.9, ರಘುವನಹಳ್ಳಿ, ಕನಕಪುರ ಮೈನ್ ರಸ್ತೆ, ಬೆಂಗಳೂರು –560 062.	ಎಂ.ಬಿ.ಎ.	60 (ಅರವತ್ತು)
14.	ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ಲಾಂಟೇಷನ್ ಮ್ಯಾನೇಜ್‌ಮೆಂಟ್, ಮಲ್ಲತ್‌ಹಳ್ಳಿ, ಬೆಂಗಳೂರು–560 056	ಎಂ.ಬಿ.ಎ.	60 (ಅರವತ್ತು)
15.	ಇಂಟರ್‌ನ್ಯಾಷನಲ್ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಎಂಟರ್‌ಪ್ರೂನರ್‌ಷಿಪ್, ನಂ.152/2, ನಿಸರ್ಗ ಕ್ಯಾಂಪಸ್, ಆರ್ಟ್ ಆಫ್ ಲಿವಿಂಗ್ ಹಿಂಬಾಗ, ಕನಕಪುರ ರಸ್ತೆ, ಉದಯಪುರ ಅಂಚೆ, ಬೆಂಗಳೂರು–560 082	ಎಂ.ಬಿ.ಎ.	60 (ಅರವತ್ತು)
16.	ಲಾರ್ವೆನ್ ಸೈಂಟ್ ಜ್ಞೇವಿಯರ್ ಕಾಲೇಜು, ಚಂದಾಪುರ, ಆನೇಕಲ್ ರಸ್ತೆ, ಬೆಂಗಳೂರು–560 081	ಎಂ.ಬಿ.ಎ.	60 (ಅರವತ್ತು)
17.	ಲಾರ್ವೆನ್ ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ನಂ.62/8ಎ, ಕೋಡಿ ಚಿಕ್ಕನಹಳ್ಳಿ ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು –68	ಎಂ.ಬಿ.ಎ.	*23 (ಇಪ್ಪತ್ತಾ ಮೂರು)*
18.	ಆಕ್ಸ್‌ಬ್ರಿಡ್ಜ್ ಬಿಸಿನೆಸ್ ಸ್ಕೂಲ್, ನಂ.8 ಮತ್ತು 9, ಮಹದೇಶ್ವರನಗರ, ವಿಶ್ವನೀಡಂ ಅಂಚೆ, ಹೇರೋಹಳ್ಳಿ ಕ್ರಾಸ್, ಬೆಂಗಳೂರು –560 091	ಎಂ.ಬಿ.ಎ	*45 (ನಲವತ್ತೈದು)*
19.	ಪದ್ಮಶ್ರೀ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಸೈನ್ಸಸ್, ಕೊಮ್ಮಘಟ್ಟ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು–560 060.	ಎಂ.ಬಿ.ಎ	120 (ನೂರ ಇಪ್ಪತ್ತು)

ಕ್ರ.ಸಂ.	ಕಾಲೇಜಿನ ಹೆಸರು ಮತ್ತು ವಿಳಾಸ	ಕೋರ್ಸು	ವಿದ್ಯಾರ್ಥಿ ಪ್ರಮಾಣ
20.	ಆರ್.ಆರ್. ಇನ್ಸಿಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್, ಚಿಕ್ಕಬಾಣವಾರ, ಹೆಸರುಘಟ್ಟ ರಸ್ತೆ, ಬೆಂಗಳೂರು –560 090.	ಎಂ.ಬಿ.ಎ.	*60 (ಅರವತ್ತು)*
21.	ಶುಶ್ರುತಿ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ನಂ.68, ಶುಶ್ರುತಿ ನಗರ, ಅಂದ್ರಹಳ್ಳಿ ಮುಖ್ಯರಸ್ತೆ, ಪೀಣ್ಯ 2ನೇ ಹಂತ, ಬೆಂಗಳೂರು –91.	ಎಂ.ಬಿ.ಎ.	60 (ಅರವತ್ತು)
22.	ಸುರಾನ ಕಾಲೇಜು, 17, ಕೆಂಗೇರಿ ಉಪನಗರ, ಬೆಂಗಳೂರು–60	ಎಂ.ಬಿ.ಎ. ಎಂ.ಸಿ.ಎ.	120 (ನೂರ ಇಪ್ಪತ್ತು) 60 (ಅರವತ್ತು)
23.	ಎಸ್.ವಿ.ಆರ್. ಕಾಲೇಜ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ನಂ.20/1, ಸಮಸಂದ್ರ ಪಾಳ್ಯ, ಹೆಚ್.ಎಸ್.ಆರ್. ಸೆಕ್ಟರ್–2, ಬೆಂಗಳೂರು–560 034	ಎಂ.ಬಿ.ಎ.	60 (ಅರವತ್ತು)
24.	ಟಿ.ಜಾನ್ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್, 86/3, ಕಮ್ಮನ ಹಳ್ಳಿ, ಗೊಟ್ಟಿಗೆರೆ ಪೋಸ್ಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು –83.	ಎಂ.ಬಿ.ಎ	120 (ನೂರ ಇಪ್ಪತ್ತು)
25.	ಟಿ.ಜಾನ್ ಕಾಲೇಜ್, 88/1, ಕಮ್ಮನ ಹಳ್ಳಿ, ಗೊಟ್ಟಿಗೆರೆ ಪೋಸ್ಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು –83.	ಎಂ.ಬಿ.ಎ. ಎಂ.ಸಿ.ಎ.	180 (ನೂರ ಎಂಭತ್ತು) 60 (ಅರವತ್ತು)
26.	ದಿ ಆಕ್ಸ್‌ಫರ್ಡ್ ಕಾಲೇಜ್ ಅಫ್ ಬಿಸಿನೆಸ್ ಮ್ಯಾನೇಜ್ಮೆಂಟ್, ನಂ.32, 19ನೆ ಮುಖ್ಯರಸ್ತೆ, 17ನೇ ಬಿ ಕ್ರಾಸ್, 4ನೇ ಸೆಕ್ಟರ್, ಹೆಚ್‌ಎಸ್‌ಆರ್ ಬಡಾವಣೆ, ಬೆಂಗಳೂರು –560 102.	ಎಂ.ಬಿ.ಎ.	180 (ನೂರ ಎಂಭತ್ತು)
27.	ದಿ ಆಕ್ಸ್‌ಫರ್ಡ್ ಕಾಲೇಜ್ ಅಫ್ ಸೈನ್ಸ್, ನಂ.32, 19ನೆ ಮುಖ್ಯರಸ್ತೆ, 17ನೇ ಬಿ ಕ್ರಾಸ್, 4ನೇ ಸೆಕ್ಟರ್, ಹೆಚ್‌ಎಸ್‌ಆರ್ ಬಡಾವಣೆ, ಬೆಂಗಳೂರು –560 102.	ಎಂ.ಸಿ.ಎ.	30 (ಮೂವತ್ತು)

ಷರತ್ತುಗಳು:

1. ಪ್ರತಿ ಶೈಕ್ಷಣಿಕ ವರ್ಷದ ಎ.ಐ.ಸಿ.ಟಿ.ಇಯ ವಿಸ್ತರಣಾ ಅನುಮೋದನೆಯನ್ನು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.
2. ಎ.ಐ.ಸಿ.ಟಿ.ಇ, ನವದೆಹಲಿ, ಕರ್ನಾಟಕ ಸರ್ಕಾರ, ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ವಿಧಿಸಿರುವ /ವಿಧಿಸುವ ಷರತ್ತು ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
3. ನಿಗಧಿತ ವಿದ್ಯಾರ್ಥಿ ಪ್ರವೇಶ ಪ್ರಮಾಣವನ್ನು ಮೀರಿದುದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾಲಯವು ಅಂಗೀಕಾರ ನೀಡುವುದಿಲ್ಲ.
4. ಯಾವುದೇ ಕೋರ್ಸಿಗೆ ವಿಶ್ವವಿದ್ಯಾಲಯದ ಪೂರ್ವಾನುಮತಿ ಇಲ್ಲದೆ ಶಾಖೆಗಳನ್ನು ಹೆಚ್ಚಿಸಬಾರದು.
5. ಕೋರ್ಸಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಕರ್ನಾಟಕ ಎಂ.ಬಿ.ಎ. ಮತ್ತು ಎಂ.ಸಿ.ಎ. ಕೋರ್ಸುಗಳ ಅಭ್ಯರ್ಥಿಗಳ ಆಯ್ಕೆ ನಿಯಮಗಳನ್ವಯ ಮಾತ್ರ ಪಡೆಯತಕ್ಕದ್ದು.
6. ಕಾಲೇಜು/ಆಡಳಿತ ಮಂಡಳಿ ಶೇ.50ರಷ್ಟು ವಿಶ್ವವಿದ್ಯಾಲಯ ಕೋಟಾವನ್ನು (ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ನಿಗಧಿಪಡಿಸತಕ್ಕದ್ದು; ಮತ್ತು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನಿಗಧಿಪಡಿಸುವ ಶುಲ್ಕವನ್ನು ಮಾತ್ರ ವಸೂಲುಮಾಡತಕ್ಕದ್ದು. ವಿಶ್ವವಿದ್ಯಾಲಯವು ನಿಗಧಿಪಡಿಸಿದ ಶುಲ್ಕ/ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.
7. ವಿಶ್ವವಿದ್ಯಾಲಯವು, ಕಾಲೇಜಿನ ವಿದ್ಯಾರ್ಥಿಗಳು, ಭೋಧಕರು ಹಾಗೂ ಭೋಧಕೇತರ ನೌಕರರ ಬಗ್ಗೆ ಕಾಲಕಾಲಕ್ಕೆ ಹೊರಡಿಸುವ ನಿಯಮಾವಳಿ/ಪರಿನಿಯಮಾವಳಿ ಮತ್ತು ಆದೇಶಗಳನ್ನು ಕಾಲೇಜು ಪಾಲಿಸತಕ್ಕದ್ದು. ಕಾಲೇಜು, ವಿಶ್ವವಿದ್ಯಾಲಯದ ಸಂಯೋಜನಾ ಅಧಿಸೂಚನೆಗನುಗುಣವಾಗಿ ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ

ಪ್ರಮಾಣವನ್ನು ಮೀರದಂತೆ ಹಾಗೂ ವಿಶ್ವವಿದ್ಯಾಲಯವು ಕೋರ್ಸುಗಳಿಗೆ ನಿಗಧಿಪಡಿಸಿರುವ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸುಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತ್ತಕ್ಕದ್ದು. ಕೋರ್ಸುಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಥಿ ಪ್ರಮಾಣವನ್ನು ಮೀರಿ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಂಡಲ್ಲಿ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

8. ವೈಶಾಕ V/S ರಾಜಸ್ಥಾನದ ರಾಜ್ಯ ಸರ್ಕಾರದ ಮೊಕದ್ದಮೆಗೆ ಸಂಬಂಧಿಸಿದಂತೆ, ದಿನಾಂಕ:13-8-1997ರ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ, ಕಾಲೇಜು ಅಥವಾ ಕಛೇರಿ, ಕೆಲಸ ನಿರ್ವಹಿಸುವ ಸ್ಥಳಗಳಲ್ಲಿ, ಯಾವುದೇ ವ್ಯಕ್ತಿ/ವಿದ್ಯಾರ್ಥಿ, ಗಲಭೆಯನ್ನು ಉಂಟುಮಾಡುವುದಾಗಲೀ ಅಥವಾ ಯಾವುದೇ ವ್ಯಕ್ತಿಯಿಂದ(ಬೋಧಕ/ ಬೋಧಕೇತರ/ ಆಡಳಿತಮಂಡಳಿ) ಅಥವಾ ವಿದ್ಯಾರ್ಥಿಯಿಂದ ಮಹಿಳೆಯರಿಗೆ/ವಿದ್ಯಾರ್ಥಿನಿಯರಿಗೆ ಯಾವುದೇ ರೀತಿಯ ಕಿರುಕಳ, ಲೈಂಗಿಕ ಕಿರುಕಳ ನೀಡುವುದು ಶಿಕ್ಷಾರ್ಹ ಅಪರಾಧವಾಗಿದೆ. ಯಾವುದೇ ವ್ಯಕ್ತಿ/ವಿದ್ಯಾರ್ಥಿ ಈ ರೀತಿಯಾದ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಲ್ಲಿ ಅಂತಹವರನ್ನು ಕೆಲಸದಿಂದ/ ವಿದ್ಯಾರ್ಥಿದೆಸೆಯಿಂದ ವಿಮುಕ್ತಿಗೊಳಿಸಬಹುದಾಗಿದೆ. ಕಾಲೇಜು ಈ ರೀತಿಯ ಅಪರಾದಗಳನ್ನು/ಚಟುವಟಿಕೆಗಳನ್ನು ಮಟ್ಟಹಾಕಲು ಸರ್ವೋಚ್ಚ ನ್ಯಾಯಲಯದ ಆದೇಶದಂತೆ ದೂರು ಸಮಿತಿಯನ್ನು ಸ್ಥಾಪನೆ ಮಾಡತಕ್ಕದ್ದು, ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು.

9. ಕಾಲೇಜು, ಕೋರ್ಸುಗಳ ಶಿಕ್ಷಣ ಕ್ರಮವನ್ನು, ವಿದ್ಯಾರ್ಥಿಗಳ ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಮಟ್ಟಕ್ಕೆ ಉತ್ತಮಪಡಿಸತಕ್ಕದ್ದು. ವಿದ್ಯಾರ್ಥಿಗಳನ್ನು, ಸೇವೆಯಲ್ಲಿರುವ ಭೋಧಕರುಗಳನ್ನು ಪ್ರಾಂಶುಪಾಲರು/ಆಡಳಿತ ಮಂಡಳಿಯವರು ಸಹಾನುಭೂತಿಯಿಂದ ನೋಡಿಕೊಳ್ಳತಕ್ಕದ್ದು.

10. ಕಾಲೇಜು ವಿನಾಕಾರಣ ವಿದ್ಯಾರ್ಥಿಗಳ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು ಆರು ತಿಂಗಳ ಅವಧಿ ಮೀರದಂತೆ ತಮ್ಮಲ್ಲಿಯೇ ಇಟ್ಟುಕೊಳ್ಳತಕ್ಕದ್ದಲ್ಲ, ಪ್ರವೇಶ ಅನುಮೋದನೆಗಾಗಿ ಸಲ್ಲಿಸಿರುವ ಅಂಕಪಟ್ಟಿ ಹಾಗೂ ಇತರೇ ದಾಖಲೆಗಳನ್ನು, ಪ್ರವೇಶ ಅನುಮೋದನೆಯಾದ ನಂತರ ವಿದ್ಯಾರ್ಥಿಗಳಿಗೆ ತ್ವರಿತವಾಗಿ ಅವರಿಗೆ ವಿತರಣೆಯನ್ನು ಮಾಡಿ ವಿಶ್ವವಿದ್ಯಾಲಯಕ್ಕೆ ತಿಳಿಸತಕ್ಕದ್ದು.

11. ವಿದ್ಯಾರ್ಥಿಗಳು, ವರ್ಗಾವಣೆ ಪತ್ರವನ್ನು ನೀಡುವ ಬಗ್ಗೆ ಮನವಿ ಸಲ್ಲಿಸಿದಲ್ಲಿ, ಕಾಲೇಜು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡದೆ, ವರ್ಗಾವಣೆ ಪತ್ರವನ್ನು ನೀಡತಕ್ಕದ್ದು. ಈ ಬಗ್ಗೆ ಆ ವರ್ಷದ/ಸೆಮಿಸ್ಟರ್‌ನ ಪೂರ್ಣವಾಗದ ಅವಧಿಯ ಭೋದನಾ ಶುಲ್ಕವನ್ನು ಹೊರತುಪಡಿಸಿ, ಯಾವುದೇ ಹೆಚ್ಚುವರಿ ಶುಲ್ಕವನ್ನು ವಸೂಲಿ ಮಾಡಲು ನಿಯಮಾವಳಿ ಪ್ರಕಾರ ಅನುಮತಿ ಇರುವುದಿಲ್ಲ.

12. ಯಾವುದೇ ರೀತಿಯಾದ ಕ್ಯಾಪಿಟೇಷನ್ ಶುಲ್ಕವನ್ನು ಕಾಲೇಜು ವಸೂಲಿ ಮಾಡತಕ್ಕದ್ದಲ್ಲ.

13. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

14. 2020-21ನೇ ಸಾಲಿಗೆ ಸದರಿ ಕೋರ್ಸಿನ ಸಂಯೋಜನಾ ನವೀಕರಣಕ್ಕಾಗಿ ಅರ್ಜಿಯನ್ನು ತಪ್ಪದೇ ಸಲ್ಲಿಸತಕ್ಕದ್ದು.

15. *ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್ (NAAC/NBA) ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.*

16. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಶಿಕ್ಷಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಕಾಲೇಜಿನ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

ಆಜ್ಞೆ ಮೇರೆಗೆ

ಕುಲಸಚಿವರು 3/9/2019

ಗೆ,

ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

ಪ್ರತಿಗಳು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ , ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು-1
2. ನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು-1.
3. ಕಾರ್ಯದರ್ಶಿಯವರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
4. ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-1.
5. ಉಪ ಕುಲಸಚಿವರು : ಅಧೀಕ್ಷಕರು ಶೈಕ್ಷಣಿಕ ವಿಭಾಗ-4, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-56.
6. ಉಪ ಕುಲಸಚಿವರು : ಅಧೀಕ್ಷಕರು ಸ್ನಾತಕೋತ್ತರ ಪರೀಕ್ಷಾ ವಿಭಾಗ, ಪರೀಕ್ಷಾಂಗ, ಬೆಂ.ವಿ., ಬೆಂಗಳೂರು-56.